**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ27.03.2026**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಡಿ ಎಸ್ ವಕೀಲರಿಂದ**

ಕರಾರು ಪತ್ರದಲ್ಲಿ ಜಿ ಪಿ ಎ ಬಗ್ಗೆ ನಮೂದಾಗಿರುವುದಿಲ್ಲ. ಜಿ ಪಿ ಎ ನಲ್ಲೂ ಸಹ ಕರಾರು ಪತ್ರದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಎರಡು ದಾಖಲಾತಿಗಳಲ್ಲಿ ಸದರಿ ವಿಚಾರ ನಮೂದು ಮಾಡಿಸಲು ತೊಂದರೆ ಇರಲಿಲ್ಲ. ಜಿ ಪಿ ಎ ನಲ್ಲಿ ಕರಾರು ಪತ್ರ ಬರೆದುಕೊಡುವ ಮತ್ತು ಮುಂಗಡ ಮೊಬಲಗು ಪಡೆದುಕೊಳ್ಳುವ ಬಗ್ಗೆ ನಮೂದು ಇದೆ ಎಂದರೆ ಸರಿ. ಕರಾರು ಪತ್ರ ಮೊದಲೇ ಆದ ಮತ್ತು ಮುಂಗಡ ಹಣ ನೀಡಿದಾಗ ಜಿ ಪಿ ಎ ನಲ್ಲಿ ಸದರಿ ಕರಾರು ಪತ್ರ ಮತ್ತು ಮುಂಗಡ ಹಣ ನೀಡುವ ಸಲುವಾಗಿ ಎಂದು ಬರೆಸುವ ಅವಶ್ಯಕತೆ ಇರಲಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಕರಾರು ಪತ್ರ ಮತ್ತು ಜಿ ಪಿ ಎ ವನ್ನು ಸೃಷ್ಟಿಸಿರುವುದರಿಂದ ಆ ರೀತಿ ವಿಚಾರ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ಸರ್ವಮಂಗಳ ರವರ ಸಹಿ ಇರುವುದಿಲ್ಲ ಎಂದರೆ ಸರಿ.

ಕರಾರು ಪತ್ರ ಮತ್ತು ಜಿ ಪಿ ಎ ಮಾಡಿಸುವ ಸಮಯದಲ್ಲಿ ನಾನು, ಚಂದ್ರಶೇಖರ ಹೋಗಿದ್ದೆವು ಮತ್ತು ಇತರರು ಯಾರು ಎಂದು ನೆನಪಿಲ್ಲ. ಕರಾರು ಪತ್ರದಲ್ಲಿ ನಮೂದಿಸಿರುವ ಚೆಕ್ ನನ್ನ ಖಾತೆಗೆ ಸಂಬಂಧಪಟ್ಟ ಚೆಕ್ ಇರಬಹುದು ಆದರೆ ನೆನಪಿಲ್ಲ. ಸದರಿ ಚೆಕ್ ನನ್ನ ಅಥವಾ ಸರ್ವಮಂಗಳ ರವರ ಖಾತೆಗೆ ಸಂಬಂಧಪಟ್ಟಿದ್ದು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಚೆಕ್ ನಗದೀಕರಣವಾಗಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ದಾಖಲಾತಿಗಳನ್ನು ಹಾಜರುಪಡಿಸದೆ ನಗದೀಕರಣ ಆಗಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ದಿಃ 14.05.2015 ರಂದು ರವೀಂದ್ರ ಕುಮಾರ ರವರು ನನಗೆ, ಮಲ್ಲೆಗೌಡ, ತೀರ್ಥರಾಜ್ ಮತ್ತು ಸರ್ವಮಂಗಳ ರವರಿಗೆ ನೋಟೀಸ ಕಳುಹಿಸಿದ್ದರು ಎಂದರೆ ಸರಿ. ದಿಃ 05.06.2015 ರಂದು ನಾನು ಮರುತ್ತರ ನೀಡಿದ್ದೇನೆ ಎಂದರೆ ಸರಿ. ಮರುತ್ತರದಲ್ಲಿ ಕ್ರಯದ ಪ್ರತಿಫಲಾ 38,000/- ಎಂದು ಮಾತ್ರ ನಮೂದು ಮಾಡಿದ್ದು, 78 ಸಾವಿರ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಕ್ರಯ ಪತ್ರದ ಪೂರ್ಣ ಪ್ರತಿಫಲಾ ಸಂದಾಯ ಆಗದ ಪಕ್ಷದಲ್ಲಿ ಕ್ರಯಪತ್ರ ಮಾನ್ಯತೆ ಹೊಂದಿರುವುದಿಲ್ಲ ಎಂದರೆ ಸಾಕ್ಷಿ ನಾನು ಎಲ್ಲ ಮೊತ್ತವನ್ನು ಪಾವತಿ ಮಾಡಿರುವುದಾಗಿ ನುಡಿಯುತ್ತಾರೆ. ನಾನಗಲೀ ಅಥವಾ ಸರ್ವಮಂಗಳ ರವರು ಆಗಲೀ ರವೀಂದ್ರ ಕುಮಾರ ರವರಿಗೆ ಯಾವುದೇ ಕ್ರಯ ಪ್ರತಿಫಲಾ ಹಣ ಸಂದಾಯ ಮಾಡಿಲ್ಲ ಎಂದರೆ ಸರಿಯಲ್ಲ.

ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಕ್ರಯ ಪತ್ರ ಮತ್ತು ಜಿ ಪಿ ಎ ವನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರವೀಂದ್ರ ಕುಮಾರ ರವರು ನನ್ನ ಬಳಿ ಬರಹಗಾರರಾಗಿ ಕೆಲಸ ಮಾಡುತ್ತಿದ್ದಾಗ ಲೆಕ್ಕಪತ್ರದಲ್ಲಿ ಅವರ ಸಹಿಯನ್ನು ನೋಡಿ ನಾನು ನಕಲು ಮಾಡಿ ದಾಖಲಾತಿಗಳನ್ನು ಸೃಷ್ಠಿಸಿರುತ್ತೇನೆಂದರೆ ಸರಿಯಲ್ಲ. ನನ್ನಿಂದ ಸರ್ವಮಂಗಳ ರವರಿಗೆ 2000 ದಲ್ಲಿ ಆದ ಕ್ರಯ ಪತ್ರ ಮತ್ತು ಸರ್ವಮಂಗಳ ರವರಿಂದ ಮಲ್ಲೇಗೌಡರಿಗೆ ಆದ 2011 ರ ಕ್ರಯ ಪತ್ರದ ದಸ್ತುರರು ಒಬ್ಬರೇ ಆಗಿರುತ್ತಾರೆಂದರೆ ಸರಿ. 2000 ಇಸವಿಯಲ್ಲಿ ಕ್ರಯ ಪತ್ರ ಆಗುವ ಕಾಲಕ್ಕೆ ರವೀಂದ್ರ ಕುಮಾರ ರವರನ್ನು ಸಂಪರ್ಕಿಸಿದರು ಅವರು ಸಿಕ್ಕಿರುವುದಿಲ್ಲ. ಅವರ ವಿಳಾಸಕ್ಕೆ ನೋಟೀಸ ಕಳುಹಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2015 ರಲ್ಲಿ ರವೀಂದ್ರ ಕುಮಾರ ರವರು ನನಗೆ ನೋಟೀಸ ಕಳುಹಿಸುವ ವರೆಗೂ ಅವರು ನನ್ನ ಸಂಪರ್ಕಕ್ಕೆ ಸಿಕ್ಕಿರುವುದಿಲ್ಲ ಎಂದರೆ ಸಾಕ್ಷಿ 2008-2009 ರಲ್ಲಿ ಮತಸಾಗರದಲ್ಲಿ ಕೆಲಸ ಮಾಡುತ್ತಿದ್ದು ಆಗ ಸಂಪರ್ಕಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ 2000 ದಲ್ಲಿ ಕ್ರಯ ಪತ್ರ ಆದ ಬಗ್ಗೆ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ರವೀಂದ್ರ ಕುಮಾರ ರವರಿಂದ ಮತ್ತು ಅವರ ವಾರಸುದಾರರಿಂದ ಒಪ್ಪಿಗೆ ಪತ್ರ ಅಥವಾ ಹಿಂಬರಹ ಪಡೆಯಲು ತೊಂದರೆ ಇತ್ತಾ ಎಂದರೆ ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

ಮಂಜೂರಾತಿ ಆಧಾರದಲ್ಲಿ ರವೀಂದ್ರ ಕುಮಾರ ಮತ್ತು ಅವರ ವಾರಸುದಾರರು ದಾವ ಆಸ್ತಿಯ ಮಾಲೀಕರಾಗಿದ್ದರು ಎಂದರೆ ಸರಿ. 2011 ರಲ್ಲಿ ಮಲ್ಲೇಗೌಡರಿಗೆ ಆಸ್ತಿ ಮಾರಾಟ ಮಾಡುವ ಸಮಯದಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತೇನೆ. ಆ ಸಮಯದಲ್ಲಿ ರವೀಂದ್ರ ಕುಮಾರ ರವರಿಗೆ ನೋಟೀಸ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. 2011 ರ ಕ್ರಯ ಪತ್ರಕ್ಕೆ ನಾನು ಸಮ್ಮತಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆಂದರೆ ಸರಿ. 2011 ರಲ್ಲಿ ನನಗೆ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರದಿದ್ದರೂ ಸಮ್ಮತಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆಂದರೆ ಸರಿ. ರವೀಂದ್ರ ಕುಮಾರ ರವರ ಸಮ್ಮತಿ ಸಹಿ ಮಾಡಿಸಲು ನನಗೆ ಅವಶ್ಯಕತೆ ಇರಲಿಲ್ಲ. ಮಲ್ಲೇಗೌಡರ ಮಗ ರಿಯಲ್ಲಿ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರಿಂದ ಆಸ್ತಿ ಖರೀದಿ ಮುನ್ನ ಸಾಮಾನ್ಯವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತಾರೆ. ಹಕ್ಕುದಾರರು ಯಾರಾದರೂ ಇದ್ದರೆ ಗೊತ್ತಾಗಲಿ ಎಂದು ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತಾರೆ.

ನನಗಿಂತ ರವೀಂದ್ರ ಕುಮಾರ ರವರು ಹಿರಿಯರು ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪತ್ರಿಕಾ ಪ್ರಕಟಣೆಯನ್ನು ಓದಲು ಆಗುತ್ತದೆ. ಯಾವ ಯಾವ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿರುತ್ತೇನೆಂದು ಹೇಳಲು ನೆನಪಿಲ್ಲ. ಕನ್ನಡ ಮತ್ತು ಇಂಗ್ಲೀಷ ದಿನಪತ್ರಿಕೆಯಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಕಟಣೆ ಮಾಡಿಸಿರುತ್ತೇನೆ ಎಂದರೆ ಸರಿ. ಪತ್ರಿಕಾ ಪ್ರಕಟಣೆಯಲ್ಲಿ ಅಕ್ಷರಗಳು ತೀರ ಚಿಕ್ಕದ್ದು ಇರುತ್ತದೆ ಎಂದರೆ ಸರಿ. ಪತ್ರಿಕಾ ಪ್ರಕಟಣೆಯಲ್ಲಿ ದಾವ ಆಸ್ತಿ ಮತ್ತು ಅದರ ಚೆಕ್ಕುಬಂದಿ ನಮೂದು ಮಾಡಿ ಪತ್ರಿಕಾ ಪ್ರಕಟಣೆ ಹೊರಡಿಸಿಲ್ಲ ಆದರೆ ಮೂರು ಆಸ್ತಿಗಳಿಗೆ ಒಂದೇ ಚೆಕ್ಕುಬಂದಿ ನಮೂದಿಸಿ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತಾರೆ ಎಂದರೆ ಸಾಕ್ಷಿ ಮೂರು ಆಸ್ತಿಗಳಿಗೆ ಒಂದೇ ಚೆಕ್ಕುಬಂದಿ ಇರುತ್ತದೆಂದು ನುಡಿಯುತ್ತಾರೆ. ಪತ್ರಿಕಾ ಪ್ರಕಟಣೆಯಲ್ಲಿ ನಮೂದು ಮಾಡಿದ ಚೆಕ್ಕುಬಂದಿ ಮತ್ತು ಕರಾರು ಪತ್ರದ ಚೆಕ್ಕುಬಂದಿ ಮತ್ತು 2000 ಮತ್ತು 2011 ರ ಕ್ರಯ ಪತ್ರದ ಚೆಕ್ಕುಬಂದಿಗಳು ಬೇರೆ ಬೇರೆಯಾಗಿರುತ್ತದೆಂದರೆ ಸರಿ. ಪತ್ರಿಕಾ ಪ್ರಕಟಣೆಯಲ್ಲಿ 7 ದಿನ ಕಾಲಾವಕಾಶ ಮಾತ್ರ ನೀಡಿರುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ 15 ರಿಂದ 30 ದಿನಗಳ ಕಾಲಾವಕಾಶ ನೀಡಬೇಕು ಎಂದರೆ ನನಗೆ ಗೊತ್ತಿಲ್ಲ. ಸಮಯಾವಕಾಶ ಇಲ್ಲದ ಯಾವುದೇ ಪತ್ರಿಕಾ ಪ್ರಕಟಣೆಗೆ ಮಾನ್ಯತೆ ಇರುವುದಿಲ್ಲ ಎಂದರೆ ಗೊತ್ತಿಲ್ಲ.

ಸರ್ಕಾರಿ ದಾಖಲಾತಿಗಳಲ್ಲಿ Mugali ಎಂದು ಇದ್ದೇಯೋ ಅಥವಾ Moogali ಎಂದು ಇದ್ದೇಯೋ ಎಂದರೆ ಎರಡು ರೀತಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಆಧಾರ ಕಾರ್ಡ್ ನಲ್ಲಿ Mugali ಎಂದು ಇರುತ್ತದೆ. ಪತ್ರಿಕಾ ಪ್ರಕಟಣೆಯಲ್ಲಿ ಊರಿನ ಹೆಸರನ್ನು ತಪ್ಪಾಗಿ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪತ್ರಿಕಾ ಪ್ರಕಟಣೆ ಕಾನೂನು ರೀತಿಯಲ್ಲಿ ಇಲ್ಲದಾ ಕಾರಣ ಮಲ್ಲೇಗೌಡರು ಸದ್ಭಾವಯುಕ್ತ ಖರೀದಿದಾರರು ಅಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಮನೆ ಕಟ್ಟಲು ಪರವಾನಗಿ ಪಡೆದಿರುತ್ತೇನೆ. ಪರವಾನಗಿಯಲ್ಲಿ ನಿವೇಶನ ಸಂಖ್ಯೆ 325 ಎಂದು ನಮೂದು ಮಾಡಿ ಪರವಾನಗಿ ಪಡೆದಿರುತ್ತಾರೆಂದರೆ ಸರಿ. ದಾವ ಆಸ್ತಿ ಅನ್ಯಸಂಕ್ರಮಣವಾಗಿಲ್ಲ ಎಂದರೆ ಸರಿ. ಕಟ್ಟಡ ಪರವಾನಗಿ ಪತ್ರ ದಾವ ಆಸ್ತಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಪರವಾನಗಿಯಲ್ಲಿ ಸ ನಂ 177 ರ ಬಗ್ಗೆ ನಮೂದು ಇಲ್ಲ ಎಂದರೆ ಗೊತ್ತಿಲ್ಲ.

ಯಾವುದೇ ಪರವಾನಗಿ ಇಲ್ಲದೇ ಬೇರೆ ದಾಖಲಾತಿಗಳ ಆಧಾರದಲ್ಲಿ ದಾವ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆಂದರೆ ಸರಿಯಲ್ಲ. ಒಂದು ವೇಳೆ ಕಾನೂನಾತ್ಮಾಕವಾಗಿ ಕಟ್ಟಡ ನಿರ್ಮಾಣ ಮಾಡಿದ್ದರೆ 2013 ರ ದಾನ ಪತ್ರದಲ್ಲಿ ಕಟ್ಟಡದ ಬಗ್ಗೆ ನಮೂದು ಮಾಡುತ್ತಿದ್ದೇವು

ಆದರೆ ಕಾನೂನು ಬಾಹಿರವಾಗಿರುವುದರಿಂದ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ರವೀಂದ್ರ ಕುಮಾರ ಮತ್ತು ಅವರ ಕುಟುಂಬದವರು 1994 ರಿಂದ 2014 ರ ವರೆಗೆ ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸಾಕ್ಷಿ 2008-2009 ರಲ್ಲಿ ಮಠಸಾಗರದಲ್ಲಿ ನನಗೆ ಸಂಪರ್ಕಕ್ಕೆ ಬಂದಿದ್ದರು ಎಂದು ನುಡಿಯುತ್ತಾರೆ. 2014 ರಲ್ಲಿ ರವೀಂದ್ರ ಕುಮಾರ ರವರ ಮಗಳ ಮದುವೆಯಾಗಿರುತ್ತದೆ ಎಂದರೆ ಸರಿ. ಮದುವೆ ಸಮಯದಲ್ಲಿ ಬೆಂಗಳೂರಿನಿಂದ ಬಾಳ್ಳುಪೇಟೆಯ ಜೆ ಪಿ ನಗರದಲ್ಲಿ ವಾಸವಿದ್ದರು ಎಂದರೆ ಸಾಕ್ಷಿ 2008-2009 ರಲ್ಲಿ ಮಠಸಾಗರದಲ್ಲಿ ಇದ್ದು ಅಲ್ಲಿಂದ ಬಾಳ್ಳುಪೇಟೆಗೆ ಬಂದಿರುತ್ತಾರೆಂದು ನುಡಿಯುತ್ತಾರೆ. ರವೀಂದ್ರ ಕುಮಾರ ರವರಿಗೆ ಹೃದಯ ಸಂಬಂಧಿ ಕಾಯಿಲೆಯಿಂದ ಮರಣ ಹೊಂದಿರುತ್ತಾರೆಂದರೆ ಸರಿ. ಅದರ ಚಿಕಿತ್ಸೆಗಾಗಿ ಅವರು ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸ್ವಲ್ಪ ದಿನ ಇದ್ದರು ಎಂದು ನುಡಿಯುತ್ತಾರೆ.

ಈ ದಾವ ಹೂಡುವ ವರೆಗೂ ರವೀಂದ್ರ ಕುಮಾರ ಮತ್ತು ಅವರ ವಾರಸುದಾರರಿಗೆ ಕ್ರಯ ಪತ್ರವಾದ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. 2000 ರಿಂದ 2014 ರವರೆಗೆ ರವೀಂದ್ರ ಕುಮಾರ ರವರಿಗೆ ಕ್ರಯ ಪತ್ರದ ಬಗ್ಗೆ ಮಾಹಿತಿ ಇತ್ತು ಎಂದು ತೋರಿಸಲು ದಾಖಲಾತಿ ಇರುವುದಿಲ್ಲ. ಆದ್ದರಿಂದ ಈ ದಾವ ಕಾಲಮಿತಿಯಿಂದ ಕೂಡಿದೆ ಎಂದರೆ ಸರಿಯಲ್ಲ. ರವೀಂದ್ರ ಕುಮಾರ ಮತ್ತು ಅವರ ವಾರಸುದಾರರು ದಾವ ಆಸ್ತಿಯಲ್ಲಿ ವಿಭಾಗಕ್ಕೆ ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ. 2000 ಮತ್ತು 2011 ರ ಕ್ರಯಪತ್ರ ಮತ್ತು 2013 ರ ದಾನಪತ್ರ ವಾದಿಯರಿಗೆ ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ. ನೋಂದಾಯಿತ ವಲ್ಲದ ಜಿ ಪಿ ಎ ಆಧಾರದಲ್ಲಿ 2000 ಇಸವಿಯ ಕ್ರಯಪತ್ರ ಯಾವುದೇ ಮಾನ್ಯತೆ ಇಲ್ಲದೇ ಇರುವುದರಿಂದ ತದನಂತರ ಆದ ಯಾವುದೇ ಕ್ರಯಪತ್ರ ಅಥವಾ ದಾನಪತ್ರಕ್ಕೆ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಹಕ್ಕನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**